ಬರವಣಿಗೆಯ ಹಂತದಲ್ಲಿ ನಮ್ಮ ನೆರವಿಗೆ ಬಾರದೇ ಇರಲೂಬಹುದು! ಆದರೆ ಈ ಕುರಿತ ಹಲ ಬಗೆಯ ತಿಳಿವಳಿಕೆಗಳು ಹಿನ್ನೆಲೆಯಲ್ಲಿದ್ದು ನಮ್ಮನ್ನು ಮುನ್ನಡೆಸುತ್ತಿರಲೂಬಹುದು.

● ಇದು ನಾನು ಬರೆಯಬಹುದಾದ ಅನುಭವ, ಇದನ್ನು ಕಥಾ ಪ್ರಕಾರದಲ್ಲಿ ನಾನೂ ಬರೆಯಬಹುದು ಎಂದು ನಿಮಗೆ ಅನ್ನಿಸಿದ್ದು ಯಾವಾಗ? ಆ ಕ್ಷಣ, ಸಂದರ್ಭವನ್ನು ಈಗ ನೆನಪಿಸಿಕೊಳ್ಳಬಹುದೆ?

ಹಾಂ! ನನ್ನ ಹದಿನ್ಶೈದನೆಯ ವಯಸ್ಸಿನಲ್ಲಿ ಪಿ.ಯು.ಸಿ. ಓದುವಾಗ ದೊಡ್ಡವರ ಮಾತಿಗೆ ಕಟ್ಟುಬಿದ್ದು ಓದಲು 'ಆರಿಸಿಕೊಂಡ' ವಿಜ್ಞಾನ ವಿಷಯಗಳನ್ನು ಓದುವ ಮನಸ್ಸಿಲ್ಲದೆ, ಓದಿದರೂ ತಲೆಗೆ ಹತ್ತದೆ, 'ಈ ಘಟನೆಯನ್ನು ಕತೆ ಮಾಡಬಹುದಲ್ಲವೆ? ಆ ಅನುಭವವನ್ನು ಕತೆಯಾಗಿಸಬಹುದಲ್ಲವೆ' ಎಂದುಕೊಂಡು 'ಕತೆ' ಬರೆಯಲೆತ್ನಿಸುತ್ತಿದ್ದೆ; ಅವು ಎಲ್ಲೂ ಪ್ರಕಟವಾಗದೆ ವಾಪಸು ಬರುತ್ತಿದ್ದವು. ಆದರೆ ನನ್ನ ಹದಿನೇಳನೆಯ ವಯಸ್ಸಿನಲ್ಲಿ ನಾನು ಓದಿದ ಹಲವು ಕತೆಗಳ ಪ್ರಭಾವದಿಂದಲೂ ಹಾಗೂ ಎಲ್ಲೋ ನಡೆದ ಅಥವಾ ನಡೆದಿದೆಯೆಂದು ಕಲ್ಪಿಸಿಕೊಂಡ ಘಟನೆಯ ಸುತ್ತ ಒಂದು ಬಂಡಾಯ ಕತೆಯನ್ನು ಬರೆದ ನೆನಪಿದೆ. 'ಸತ್ತ ಬದುಕಿನ ಸುತ್ತ' ಎಂಬ ಈ ಕತೆ ಮುಂದಿನ ಎರಡೇ ವಾರದಲ್ಲಿ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದಾಗ, ನಾನು ಕತೆಗಾರನಾಗಿಯೇಬಿಟ್ಟೆ ಎಂದು ಉಬ್ಬಿದೆ. ಆದರೆ, ಯಾರೂ ಕತೆಗಾರ 'ಆಗುವುದಿಲ್ಲ'; ಲೇಖಕನೊಬ್ಬ ಪ್ರತಿಯೊಂದು ಕತೆ ಬರೆಯುವಾಗಲೂ ಹೊಸ ಕತೆಗಾರನಾಗಲು ಪ್ರಯತ್ನಿಸುತ್ತಾನೆ ಎಂಬ ವಿವೇಕ ಅಸ್ಪಷ್ಟವಾಗಿಯಾದರೂ ಇತ್ತೀಚಿನ ವರ್ಷಗಳಲ್ಲಿ ನನಗೆ ಬಂದಂತಿದೆ! ಅನುಭವಗಳು ತಮ್ಮ ಸ್ವರೂಪಕ್ಕೆ ತಕ್ಕ ತಂತ್ರಗಳನ್ನೂ, ಕತೆ ಹೇಳುವ ದೃಷ್ಟಿಕೋನಗಳನ್ನೂ ಹುಡುಕಿಕೊಳ್ಳುತ್ತವೆ ಎಂಬುದನ್ನು ಓದಿ ತಿಳಿದಿದ್ದರೂ, ಅದು ನನ್ನ ಅನುಭವವಾಗಿ ಅರಿವಿಗೆ ಬಂದದ್ದು ತೀರ ತಡವಾಗಿ!

● ನಿಮ್ಮ ಕಥಾ ಬರವಣಿಗೆಯ ಕ್ರಮವನ್ನು ಸಂಗ್ರಹವಾಗಿ ವಿವರಿಸಬಹುದೆ?

ಇದು ತೀರಾ ಕಷ್ಟದ ಕೆಲಸ. ಅಸ್ಪಷ್ಟವಾಗಿದ್ದ ಭಾವನೆಗಳು, ಸಂಗತಿಗಳು ಅಷ್ಟಿಷ್ಟು ಸ್ಪಷ್ಟವಾಗತೊಡಗುವುದೇ ಬರವಣಿಗೆಯ ಪಯಣದಲ್ಲಿ ಎಂಬುದು ನನ್ನ ಅನುಭವ. ಆದರೂ ನೀವು ಕೇಳಿದ್ದರಿಂದ ಈ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸುತ್ತೇನೆ: ಯಾವುದೋ ಚಿತ್ರ ಅಥವಾ ಪ್ರತಿಮೆ ಯಾವುದೋ ಗಳಿಗೆಯಲ್ಲಿ ನನ್ನೊಳಗೆ ಮೂಡಿ ಅದು ಒಳಗೊಳಗೇ ಅಡ್ಡಾಡಿ ಮುಂದೆ ಇನ್ನೇನೋ ಆಗುತ್ತದೆಂದು ಕಾಣುತ್ತದೆ. ಒಂದು ಸಂಜೆ ಬೆಂಗಳೂರಿನ ಮಾರ್ಥಾಸ್ ಆಸ್ಪತ್ರೆಯ ಎದುರಿಗಿರುವ ಕಬ್ಬನ್ ಪೇಟೆಗೆ ಹೊಂದಿಕೊಂಡಂತಿರುವ ಬಯಲಿನಲ್ಲಿ ಸಂಜೆಯ ಮಬ್ಬಿಳಿಯುವ ಹೊತ್ತಿಗೆ ಒಬ್ಬಾಕೆ ಪುಟ್ಟ ಕನ್ನಡಿಯನ್ನು ಮಂಡಿಯ ಚಿಪ್ಪಿನ ನಡುವೆ ಇಟ್ಟುಕೊಂಡು, ಬಾಗಿ ತನ್ನ ಮುಖ ನೋಡಿಕೊಳ್ಳುತ್ತಾ ತಲೆ ಬಾಚಿಕೊಳ್ಳುತ್ತಿದ್ದಳು. ಯಾಕೋ ಏನೋ, ಆಕೆ ತನ್ನ ರಾತ್ರಿಯ ವೃತ್ತಿಗೆ ಹೊರಡಲು ತಯಾರಾಗುತ್ತಿರುವ ವೇಶ್ಯೆ ಎಂದು ನನಗನ್ನಿಸಿತೆಂದು ತೋರುತ್ತದೆ. ಅದು ನನ್ನ 'ಮಾಯಾಕಿನ್ನರಿ' ಕತೆಯ ಗರ್ಭಧಾರಣೆಯ ಗಳಿಗೆ. ಅದರ ಜೊತೆಗೆ ನಾನು ಕಂಡಿದ್ದು, ಕೇಳಿದ್ದು, ಊಹಿಸಿದ್ದು ಎಲ್ಲವೂ ಸೇರಿ ಆ ಕತೆ ಬೆಳೆಯತೊಡಗಿತು. 1990ರಲ್ಲಿ ಶುರುವಾದ ಆ ಕತೆ ಮುಗಿದಿದ್ದು 1992ರಲ್ಲಿ.

ಹಾಗೆಯೇ, ನನ್ನ 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' ಕತೆ ಶುರುವಾದದ್ದು